64

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವೇಕಾನಂದ ಕಾನೂನು ಕಾಲೇಜು, ಬೆಂಗಳೂರು ಈ ಕಾಲೇಜಿನ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರಿ ಆದೇಶ ಸಂಖ್ಯೆ: ಲಾ 81 ಕೆಎಲ್ಎಂ 2009, ದಿನಾಂಕ: 28-11-2012.
2) ಸರ್ಕಾರಿ ಆದೇಶ ಸಂಖ್ಯೆ: ಲಾ 16 ಕೆಎಲ್ಎಂ 2013, ದಿನಾಂಕ: 26-08-2015.
3) ಸರ್ಕಾರದ ತಿದ್ದೋಲೆ ಸಂಖ್ಯೆ: ಲಾ 56 ಕೆಎಲ್ಎಂ 2013, ದಿನಾಂಕ:18-12-2015.
4) ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾಶಿಇ/27/ಲಾ/ಖಾಕಾಕಾ/2012-13/ಕಾಕಾವಿ/ಸೇವಿ-1(ಭಾಗ-2), ದಿನಾಂಕ:12.02.2016.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರಿ ಆದೇಶ ದಿನಾಂಕ: 28.11.2012ರಲ್ಲಿ ಪ್ರೊ. ಮಾಲಿ ಮುದ್ದಣ ವರದಿಯನ್ವಾಧರಿಸಿ ಸರ್ಕಾರವು ಸುಸ್ಥಿತಿಯಲ್ಲಿರುವ ಹಾಗೂ ಸತತವಾಗಿ ಆಯಾ ವಿಶ್ವವಿದ್ಯಾಲಯಗಳಿಗೆ 5 (ಐದು) ವರ್ಷಗಳ ಎಲ್.ಎಲ್.ಬಿ ಕೋರ್ಸು ಅಥವಾ 3 (ಮೂರು) ವರ್ಷಗಳ ಎಲ್.ಎಲ್.ಬಿ ಕೋರ್ಸು ಅಥವಾ ಎರಡೂ ಅವಧಿಯ ಎಲ್.ಎಲ್.ಬಿ. ಕೋರ್ಸ್‌ಗಳನ್ನು ನಡೆಸಲು ಸಂಯೋಜನೆ ಮಾಡಿಕೊಂಡಿದ್ದ ಒಟ್ಟು 19 ಖಾಸಗಿ ಕಾನೂನು ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ತಾತ್ವಿಕವಾಗಿ ಒಪ್ಪಿ ಆದೇಶ ಹೊರಡಿಸಿದೆ. ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಸರ್ಕಾರದ ಅನುದಾನಕ್ಕೆ ಒಳಪಡಿಸಿದ ಖಾಸಗಿ ಕಾನೂನು ಕಾಲೇಜುಗಳ ಪೈಕಿ ಕ್ರಮ ಸಂಖ್ಯೆ: (18) ರ ವಿವೇಕಾನಂದ ಕಾನೂನು ಕಾಲೇಜು, ಬೆಂಗಳೂರು ಇಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಯನ್ನು ಅನುಮೋದಿಸಲಾಗಿದೆ.

ಸದರಿ ಆದೇಶದಲ್ಲಿ ಕೆಲವೊಂದು ಕಾರಣಕ್ಕಾಗಿ ಬೋಧಕ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಿರುವುದಿಲ್ಲ. ಈ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸದೇ ಇರುವ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಸಿಬ್ಬಂದಿಗಳು ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಯುಕ್ತ ಮಾರ್ಗದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದಲ್ಲಿ, ಅಂತಹ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ದಿನಾಂಕ: 26.08.2015ರ ಆದೇಶದಲ್ಲಿ ಸೂಚಿಸಲಾಗಿತ್ತು.

ಅದರಂತೆ, ಮೇಲೆ ಓದಲಾದ (4)ರ ಪತ್ರದಲ್ಲಿ ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ದಿನಾಂಕ: 26.08.2015ರ ಆದೇಶದಲ್ಲಿ ವೇತನಾನುದಾನಕ್ಕೆ ಒಳಪಡಿಸದೇ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

Principal
VIVEKANANDA COLLEGE OF LAW
# 12/1, 3rd Cross, Maruthi Extn.
Gayathri Nagar, Bangalore -560 021

ವಿವೇಕಾನಂದ ಕಾನೂನು ಕಾಲೇಜು, ಬೆಂಗಳೂರು ಇಲ್ಲಿ 22-ಬೋಧಕ ಮತ್ತು 19-ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ದಿನಾಂಕ:26.08.2015ರ ಸರ್ಕಾರಿ ಆದೇಶದಲ್ಲಿ 04-ಬೋಧಕರು ಮತ್ತು 09-ಬೋಧಕೇತರ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ. ಬೋಧಕ ಹುದ್ದೆಗಳ ಪೈಕಿ 04-ಮೀಸಲಾತಿ ಹುದ್ದೆಗಳನ್ನು ಹೊರತುಪಡಿಸಿ, 13-ಸಹಾಯಕ ಪ್ರಾಧ್ಯಾಪಕರು, 01-ದೈಹಿಕ ಶಿಕ್ಷಣ ಹುದ್ದೆ ಖಾಲಿಯಿರುತ್ತದೆ. ದಿನಾಂಕ:26.08.2015ರ ಸರ್ಕಾರಿ ಆದೇಶದಲ್ಲಿ ವೇತನಾನುದಾನಕ್ಕೆ ಒಳಪಡಿಸಿರುವ ಸಹಾಯಕ ಪ್ರಾಧ್ಯಾಪಕರಾದ ಕೆ.ಸತೀಶ್ ಇವರು ರಾಜೀನಾಮೆ ಸಲ್ಲಿಸಿರುವುದರಿಂದ ಒಟ್ಟು 14-ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿಯಿರುತ್ತದೆ. ಬೋಧಕೇತರ ಹುದ್ದೆಗಳ ಪೈಕಿ 07 ಮೀಸಲಾತಿ ಹುದ್ದೆಗಳನ್ನು ಹೊರತುಪಡಿಸಿ 01-ದಿ.ದ.ಸ, 02-ಪರಿಚಾರಕರ ಹುದ್ದೆ ಖಾಲಿಯಿರುತ್ತದೆ

ದಿನಾಂಕ:26.08.2015ರ ಸರ್ಕಾರಿ ಆದೇಶದಲ್ಲಿ ಸಹಾಯಕ ಪ್ರಾಧ್ಯಾಪಕರುಗಳಾದ ಎಸ್.ವಿ.ನಾಗೇಶ್ವರ ರಾವ್ ಮತ್ತು ಶ್ರೀಮತಿ ಸುಮಿತ್ರ.ಆರ್. ಇವರುಗಳನ್ನು ನೇಮಕಾತಿ ಸಮಯದಲ್ಲಿ ವಯೋಮಿತಿ ಮೀರಿರುವುದರಿಂದ ವೇತನಾನುದಾನಕ್ಕೆ ಒಳಪಡಿಸಿರುವುದಿಲ್ಲ. ಎಸ್.ವಿ.ನಾಗೇಶ್ವರ ರಾವ್ ಇವರು ಡಿ.ಎಸ್.ಆರ್. ಹಿಂದು ಕಾಲೇಜು ಆಫ್ ಇಂಡಿಯಾ, ಮಂಚಲಿ ಪಟ್ಟಣಂ, ಇಲ್ಲಿ ದಿನಾಂಕ:20.02.1986ರಿಂದ 31.08.1996ರವರೆಗೆ ಹಾಗೂ ಡಾ॥ ಅಂಬೇಡ್ಕರ್ ಲಾ ಕಾಲೇಜು, ತಿರುಪತಿ, ಇಲ್ಲಿ ದಿನಾಂಕ:01.09.1996ರಿಂದ 26.08.1999ರವರೆಗೆ ಕಾರ್ಯನಿರ್ವಹಿಸಿದ್ದು, ನಂತರ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ದಿನಾಂಕ:27.08.1999 ಕರ್ತವ್ಯ ನಿರ್ವಹಿಸುತ್ತಿದ್ದು ಈ ಹಿಂದಿನ ಸೇವೆಯನ್ನು ಪರಿಗಣಿಸಿ ಇವರನ್ನು ಸರ್ಕಾರಿ ಅಧಿಸೂಚನೆ ಸಂಖ್ಯೆ:F-1-11/87(CPP), ದಿನಾಂಕ:19.09.1991ರನ್ವಯ ಸದರಿಯವರು ದಿನಾಂಕ:19.09.1991ರೊಳಗೆ ನೇಮಕಾತಿ ಹೊಂದಿರುವುದರಿಂದ ಹಾಗೂ ಎಲ್.ಎಲ್.ಎಂ.ನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುವುದರಿಂದ ಇವರಿಗೆ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನಾನುದಾನಕ್ಕೆ ಒಳಪಡಿಸಬಹುದು ಎಂದು ಹಾಗೂ ಶ್ರೀಮತಿ ಸುಮಿತ್ರ ಆರ್. ಇವರು ದಿನಾಂಕ: 14.08.2000 ದಿಂದ 25.09.2004 ರವರೆಗೆ ವಿಶ್ವೇಶ್ವರಪುರಂ ಕಾನೂನು ಕಾಲೇಜು, ಬೆಂಗಳೂರು ಮತ್ತು ದಿನಾಂಕ: 26.09.2004 ರಿಂದ 21.01.2013 ರವರೆಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಿದ್ದು, ಈ ಅವಧಿಯನ್ನು ಪರಿಗಣಿಸಿ ವೇತನಾನುಧಾನಕ್ಕೆ ಒಳಪಡಿಸಬಹುದು ಮತ್ತು ಸದರಿಯವರು ದಿನಾಂಕ: 26.06.2005ರಂದು ಎನ್ಇಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು ಇವರನ್ನು ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನಾನುದಾನಕ್ಕೆ ಒಳಪಡಿಸಬಹುದಾಗಿದೆ ಎಂದು ಕಾಲೇಜು ಶಿಕ್ಷಣ ಆಯುಕ್ತರು ಅಭಿಪ್ರಾಯ ನೀಡಿರುತ್ತಾರೆ.

ದಿನಾಂಕ:26.08.2015ರ ಸರ್ಕಾರಿ ಆದೇಶದಲ್ಲಿ ಶ್ರೀಮತಿ ಭುವನೇಶ್ವರಿ ಎಸ್., ಕೋಲಾಕಿ ಸಹಾಯಕ ಪ್ರಾಧ್ಯಾಪಕರು, ಇವರು ನಿಗದಿತ ವಿದ್ಯಾರ್ಹತೆಯಾದ ಎನ್ಇಟಿ/ ಎಸ್ಎಲ್ ಇಟಿ/ ಪಿಹೆಚ್‌ಡಿ ಪದವಿ ಪಡೆದಿರುವುದಿಲ್ಲವಾದ್ದರಿಂದ ಇವರನ್ನು ವೇತನಾನುದಾನಕ್ಕೆ ಒಳಪಡಿಸಿರುವುದಿಲ್ಲ. ಆದರೆ ಸದರಿಯವರು ದಿನಾಂಕ:28.04.2014ರಂದು ಕೆ.ಎಸ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರಿಂದ ಇವರನ್ನು ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನಾನುದಾನಕ್ಕೆ ಒಳಪಡಿಸಬಹುದೆಂದು ಕಾಲೇಜು ಶಿಕ್ಷಣ ಆಯುಕ್ತರು ಅಭಿಪ್ರಾಯ ನೀಡಿರುತ್ತಾರೆ.

Principal
VIVEKANANDA COLLEGE OF LAW
#.12/1, 3rd Cross, Maruthi Extn.
Gayathri Nagar, Bangalore-560 021

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಉಶಿ 56 ಕಿಎಲ್‌ಎಂ 2013, ಬೆಂಗಳೂರು, ದಿನಾಂಕ: 16.07.2016.**

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿವೇಕಾನಂದ ಕಾನೂನು ಕಾಲೇಜು ಬೆಂಗಳೂರು ಇಲ್ಲಿ 14-ಜಿ.ಎಂ. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿಯಿದ್ದು, ಈ ಕೆಳಕಂಡ ಮೂರು ಸಹಾಯಕ ಪ್ರಾಧ್ಯಾಪಕರುಗಳನ್ನು ಆದೇಶ ಹೊರಡಿಸಿದ ದಿನಾಂಕದಿಂದ ಈ ಕೆಳಕಂಡ ಷರತ್ತುಗಳೊಂದಿಗೆ ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ಸಹಮತಿ ನೀಡಿದೆ.

| ಕ್ರ ಸಂ. | ಹೆಸರು ಮತ್ತು ಹುದ್ದೆ | ಜನ್ಮ ದಿನಾಂಕ | LLM ಶೇಕಡಾ ಅಂಕ | ಮೀಸಲಾತಿ | ಸೇವೆಗೆ ಸೇರಿದ ದಿನಾಂಕ | ವೇತನ ಶ್ರೇಣಿ |
|---|---|---|---|---|---|---|
| 1. | ಭುವನೇಶ್ವರಿ ಎಸ್. ಕೋಲಾಕಿ, ಸಹಾಯಕ ಪ್ರಾಧ್ಯಾಪಕರು | 27.10.1979 | 57.75 | 2ಎ | 02.01.2013 | ಯು.ಜಿ.ಸಿ ವೇತನ ಶ್ರೇಣಿ (ಕೆ.ಎಸ್.ಇ.ಟಿ. ವಿದ್ಯಾರ್ಹತೆ ಹೊಂದಿರುತ್ತಾರೆ) |
| 2. | ಎಸ್.ವಿ. ನಾಗೇಶ್ವರ ರಾವ್, ಸಹಾಯಕ ಪ್ರಾಧ್ಯಾಪಕರು | 15.07.1958 | 60.75 | ಜಿ.ಎಂ | 20.02.1986 | ಯು.ಜಿ.ಸಿ ವೇತನ ಶ್ರೇಣಿ |
| 3. | ಸುಮಿತ್ರ ಆರ್. ಸಹಾಯಕ ಪ್ರಾಧ್ಯಾಪಕರು, | 08.05.1972 | 55 | ಜಿ.ಎಂ. | 14.08.2000 | ಯು.ಜಿ.ಸಿ ವೇತನ ಶ್ರೇಣಿ (ಎಸ್.ಇ.ಟಿ. ವಿದ್ಯಾರ್ಹತೆ ಹೊಂದಿರುತ್ತಾರೆ. |

**ಷರತ್ತುಗಳು :**

(1) ಹಿಂದುಳಿದ ವರ್ಗಗಳ ಪ್ರಾತಿನಿಧ್ಯದಲ್ಲಿ ಮೀಸಲಾತಿ ಕೊರತೆಯನ್ನು ಭವಿಷ್ಯತ್ತಿನಲ್ಲಿ ತೆರವಾಗುವ ಎಲ್ಲಾ ಹುದ್ದೆಗಳನ್ನು ಮೀಸಲಾತಿ ಕೊರತೆ ಸರಿದೂಗುವವರೆಗೆ ಸಂಬಂಧಪಟ್ಟ ಮೀಸಲಾತಿ ಅಭ್ಯರ್ಥಿಗಳಿಂದಲೇ ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.

(2) ಈ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿ/ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ದೃಢೀಕರಿಸಿಕೊಂಡ ನಂತರವೇ ವೇತನ ಪಾವತಿಗೆ ಕ್ರಮಕೈಗೊಳ್ಳುವುದು.

Principal
VIVEKANANDA COLLEGE OF LAW
#121, 3rd Cross, Maruthi Extn.
Gayathri Nagar, Bangalore -560 021

67



(3) ಈ ಆದೇಶದನ್ವಯ ವೇತನಾನುದಾನಕ್ಕೆ ಒಳಪಟ್ಟಿರುವ ಬೋಧಕ ಹಾಗೂ ಬೋಧಕೇತರರ ಸಿಬ್ಬಂದಿಗಳಿಗೆ ವೇತನ ಬಿಡುಗಡೆ ಮಾಡುವ ಮುನ್ನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಡಿಯಲ್ಲಿ ನೇಮಕಾತಿ ಹೊಂದಿದ್ದಲ್ಲಿ ಅಂತಹ ಸಿಬ್ಬಂದಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಖಚಿತಪಡಿಸಿಕೊಳ್ಳತಕ್ಕದ್ದು.

(4) ಹುದ್ದೆ ಅನುಮೋದನೆಗೊಂಡಿರುವ ಸಿಬ್ಬಂದಿಯು ಯಾವುದೇ ಹಂತದಲ್ಲಿ ತಪ್ಪು ಹೇಳಿಕೆ/ಅಸತ್ಯವಾದ ಮಾಹಿತಿಯನ್ನು ಒದಗಿಸಿದಲ್ಲಿ ಅಂತಹ ನೇಮಕಾತಿಯನ್ನು ರದ್ದುಪಡಿಸಲಾಗುವುದು.

5) ಸಿಬ್ಬಂದಿಗಳ ವೇತನಾನುದಾನವು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

(6) ದಿನಾಂಕ: 24.12.1998ಕ್ಕಿಂತ ಹಿಂದೆ ನೇಮಕವಾದ ಉಪನ್ಯಾಸಕರುಗಳು ಸೇವಾ ವಿಚ್ಛಿನ್ನತೆಯನ್ನು ಹೊಂದಿರಬಾರದು.

(7) ಮುಂದೆ ತುಂಬಲಾಗುವ ಹುದ್ದೆಗಳಿಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.

(8) ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಅನುದಾನ ರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲ ಎಂಬ ಷರತ್ತಿಗೆ ಬದ್ಧನಾಗಿರುತ್ತೇನೆಂದು ರೂ.50/- ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ಬರೆಯಿಸಿಕೊಳ್ಳತಕ್ಕದ್ದು.

(9) ಮೇಲಿನ ಆದೇಶದನ್ವಯ ಈ ಕಾಲೇಜಿಗೆ ಸಂಬಂಧಿಸಿದಂತೆ ನೇಮಕವಾಗಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ವೇತನಾನುದಾನವನ್ನು ಬಿಡುಗಡೆ ಮಾಡುವ ಮುನ್ನ ನ್ಯಾಯಾಲಯದಲ್ಲಿ ಯಾವುದೇ ವಿಧವಾದ ವ್ಯಾಜ್ಯ/ವಿವಾದ ಬಾಕಿ ಇರುವುದಿಲ್ಲ ಎಂಬುದನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು.

(10) ಸದರಿ ಆದೇಶದಲ್ಲಿ ವೇತನಾನುದಾನಕ್ಕೆ ಒಳಪಡಿಸಿರುವ ಸಿಬ್ಬಂದಿಗಳನ್ನು ಹೆಚ್.ಆರ್.ಎಂ.ಎಸ್.ನಲ್ಲಿ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

(11) ಸದರಿ ಕಾಲೇಜಿನಲ್ಲಿ ಇನ್ನು ಮುಂದೆ ನೌಕರರ ರಾಜೀನಾಮೆ, ನಿವೃತ್ತಿ ಮತ್ತು ನಿಧನದಿಂದ ತೆರವಾಗುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ನೇಮಕಾತಿಗಾಗಿ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯುವುದು.

(12) ಸಂಬಂಧಪಟ್ಟ ಜಂಟಿ ನಿರ್ದೇಶಕರು ಪ್ರತಿ ವರ್ಷವು ವೇತನಾನುದಾನಕ್ಕೆ ಒಳಪಟ್ಟಿರುವ ಕಾಲೇಜಿನ ಆಡಳಿತ ಮಂಡಳಿಯು ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವುದನ್ನು ದೃಢೀಕರಿಸಿದ ನಂತರವೇ ಆಯುಕ್ತಾಲಯದಿಂದ ಅನುದಾನ ಬಿಡುಗಡೆ ಮಾಡತಕ್ಕದ್ದು.

Principal
VIVEKANANDA COLLEGE OF LAW
# 12/1, 3rd Cross, Maruthi Extn.
Gayathri Nagar, Bangalore -560 021.

68



(13) ವೇತನಾನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಯಾವುದೇ ನ್ಯೂನತೆಗಳು ಉಂಟಾದಲ್ಲಿ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯವರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಮೇಲೆ ಅನುದಾನಕ್ಕೆ ಒಳಪಡಿಸಿರುವ ವಿವೇಕಾನಂದ ಕಾನೂನು ಕಾಲೇಜು, ಬೆಂಗಳೂರು ಈ ಸಂಸ್ಥೆಯ ವೇತನಾನುದಾನದ ವೆಚ್ಚವನ್ನು ಕಾನೂನು ಇಲಾಖೆಯ ಲೆಕ್ಕ ಶೀರ್ಷಿಕೆ ಸಂಖ್ಯೆ:2014-00-105-0-15 Private Aided Law Colleges-101-Grant-in aid Schemes (Plan) ರಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 176 ವೆಚ್ಚ-10/2016, ದಿನಾಂಕ: 11.07.2016ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
[signature] 16/7/16
(ಸಿ.ಎಸ್. ಸುಧಾಮಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಇಲಾಖೆ (ಮಾನವ ಹಕ್ಕುಗಳು)

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ-ಇದನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 100 ಪ್ರತಿಗಳನ್ನು ಕಾನೂನು ಇಲಾಖೆ (ಮಾನವ ಹಕ್ಕುಗಳು ಶಾಖೆ), ಕೊಠಡಿ ಸಂಖ್ಯೆ: 201, ವಿಕಾಸ ಸೌಧ, ಬೆಂಗಳೂರು ಇವರಿಗೆ ಕಳುಹಿಸಿ ಕೊಡಲು ಕೋರಿದೆ

ಪ್ರತಿ:

1) ಪ್ರಧಾನ ಮಹಾಲೇಖಪಾಲರು (ಜಿ ಮತ್ತು ಎಸ್.ಎಸ್.ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560 001.
2) ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, "ಅಂಚೆ ಪೆಟ್ಟಿಗೆ ಸಂಖ್ಯೆ: 5329", ಬೆಂಗಳೂರು – 560 001.
3) ಪ್ರಧಾನ ಮಹಾಲೇಖಪಾಲರು (ಇ ಮತ್ತು ಆರ್.ಎಸ್.ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560 001.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
8) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
9) ಪ್ರಾಂಶುಪಾಲರು, ವಿವೇಕಾನಂದ ಕಾನೂನು ಕಾಲೇಜು, ನಂ.12/1, 3ನೇ ಕ್ರಾಸ್, ಮಾರುತಿ ...

Principal
VIVEKANANDA COLLEGE OF LAW
# 12/1, 3rd Cross, Maruthi Extn.
Gayathri Nagar, Bangalore -560 021
ಪ್ರಾಂಶುಪಾಲರು

Translated copy of the Government Order depicting the teacher's sanctioned posts

**Proceedings of the Government Karnataka**

Sub :- Vivekananda College of Law, Bengaluru, Approval of the appointments made to the Teaching and Non -Teaching posts

Ref:-

1. Government Order bearing No. Law 81 KLM 2009, dtd. 28.1 1.2012
2. Govemment Order bearing No. Law 66 KLM 2013, dtd. 26.08 .2015
3. Govemment Corrigendum No. Law 56 KLM 2013, dtd. 18.12.2015
4. Letter of Additional Director, Collegiate Education, Department of Collegiate Education, Bangalore, bearing No. D CE /27/Law /PLC/ 2012- 1 3/PLC/Recruitment Division-1 (Part-2) dtd. 12.02.16

*****

Proposal

In the Government Order read in above cited S1.no.(1), dtd. 28.11.2012,the govemment, has agreed for sanctioning Grant in aid to 19 private law colleges, as per Prof. Mali Muddanna Committee report, those are in good condition and those are offering 5 (five) years LLB Course or 3 (three) years LLB course or courses of both durations, to their respective universities, Among the Private Law colleges which are sanctioned Grant-in-Aid by Govemment, the Government has decided to sanction Grant-in-Aid service to the teaching and non-teaching staff of Vivekananda College of Law, Bengaluru, which is in S1 No 18.

In the said order, due to some reasons, some of the teaching staff are not considered for Grant-in-Aid. In relation to the cases of not sanctioning the Grant-in-Aid to the teaching and non-teaching staff of this college, the concerned staff or employees were intimated in order dtd. 26.08.2015, to submit the necessary documents to Government, through proper channel, within one month duration of passing of this order and further it was intimated that, if submitted, then such appeals will be verified.

Accordingly, in letter cited above in read Sl.No.4, the Additional Director of Collegiate Education, Department of Collegiate Education, has provided the information of teaching and non-teaching staff who were not considered for Grant-in-Aid in the order dtd. 26.08.2015.

In Vivekananda College of Law, Bengaluru, 22 - Teaching and 19 - Non -Teaching posts are sanctioned. In Government Order dtd. 26.08.2015, 04 Teachers and 09 Non-teaching employees are sanctioned Grant-in-aid. Among teaching staff except 04 posts under reservation, 01- Physical Education and 13 - Assistant Professor posts are vacant. Mr K Sathish, who was included for Grant in Aid in the Government Order Dated 26.08.2015, tendered resignation, due to which 14 Assistant Professors post are vacant. Except 07 posts of Reserved Non-teaching staff - 01 post of Second Division Assistant, 02 posts of Attenders are vacant.

In Government Order dtd. 26.08:2015, Assistant Professors S V Nageshwara Rao and Smt Sumithra.R were not considered for Grant in Aid as they were above the prescribed age limit at the time of recruitment. S V Nageshwara Rao, worked in D S R Hindu College of India, Machali Patnam from 20.02.1986 to 31.08.1996 and at Dr Ambedkar Law College, Tirupati from 01.09.1996 to 26.08.1999 and joined Vivekananda College of Law, from 27.08.1999.

Principal
VIVEKANANDA COLLEGE OF LAW
# 12/1, 3rd Cross, Maruthi Extn
Gayathri Nagar, Bengaluru-560 021

Considering his past services as per Government Notification No F-1-11/87(CPP), and he was appointed before 19.09.1991 and he has passed LLM with First Class, he may be considered for UGC pay scale and Smt Sumithra R has served in Visveswarapura College of Law, Bengaluru from 14.08.2000 to 25.09.2004 and in Seshadripuram Law College from 26.09.2004 to 21.01.2013, this period has been considered and she may be included in Grant in Aid and she has also cleared NET exam conducted by UGC due to which she may be included for Grant in Aid, as opined by the Commissioner, Collegiate Education.

In Government Order dtd. 26.08.2015, Smt Bhuvaneshwari S Kolaki, Assistant Professor, does not have prescribed qualification f NET/SLET/PhD, she was not considered for Grant in Aid. But she cleared K.S.E.T exam on 28.04.2014 because of which she may be considered for UGC pay scale- as opined by Commissioner, Collegiate Education.

After verifying the proposal, the Government has ordered as follows.

**Government Order bearing No: Law 56 KLM 2013, Bengaluru dtd. 16.07.2016**

In the back ground of the issues contained in the above proposal, in Vivekananda College of Law, Bengaluru 14-posts of Assistant Professors (GM) are vacant. The Govertnment has agreed to include the following Assistant Professors in the Grant in Aid from the date of the Order with the below mentioned conditions.

| Sl. No | Name and Designation | Date of Birth | LL M | Reservation | Date of joining to Service | Pay Scale |
|---|---|---|---|---|---|---|
| 1. | Bhuvaneshwari S Kolaki Assistant Professor | 27.10.1979 | 57.75 | II A | 02.01.2013 | UGC Pay Scale (K.S.E.T) |
| 2. | S V Nageswara Rao Assistant Professor | 15.07.1958 | 60.75 | GM | 20.02.1986 | UGC Pay Scale |
| 3. | R Sumithra Assistant Professor | 08.05.1972 | 55 | GM | 14.08.2000 | UGC Pay Scale (NET) |

Conditions:

1. Lack of representation to the Reserved category should be made good in the future by appointing the candidates from the reserved category whenever a vacancy arises in future so that the required representation is given to them.
2. The teaching and non-teaching staff of this college should be included in Grant in Aid only after the verification of the authenticity of their marks cards and their degree certificates of their educational qualification by the Regional Joint Director.
3. In pursuance of this order, the teaching and non-teaching staff who have been included in Grant in Aid, and those who have been recruited under Schedule Caste,

Principal
VIVEKANANDA COLLEGE OF LAW
# 12/1, 3rd Cross, Maruthi Extn
Gayathri Nagar, Bengaluru-560 021

Schedule Tribe and Backward classes, before the release of salary, the Genuineness of their Caste certificate should be verified by the concerned authority.

4. After the approval of the post, if any staff is found to have furnished false information/statement, the appointment of such staff may be cancelled.
5. Grant in Aid for the staff will come into existence from the date of this order.
6. The lecturers who were appointed before 24.12.1998 should not have any break in service.
7. Henceforth, prior permission should be obtained by the competent authority before filling the posts.
8. The concerned Regional Joint Director should get an undertaking executed by the teaching and non-teaching staff on a 50/-stamp paper stating that Service rendered by them during the non-grant period shall not be considered for any service benefits.
9. The Regional Joint Commissioner shall ensure that there is no pending disputes/suits in the court of law with respect to the appointments made in this college in pursuance of the above order.
10. Necessary action should be initiated to include the staff who have been included in the grant in Aid, to include their names in the H.R.M.S.
11. In this college, hence forth, whenever the vacancies arise out of resignation, retirement and death of the teaching and non-teaching staff, the posts should be filled up only after adhering to the Reservation policy and after obtaining the prior approval of the Government.
12. The concerned Joint Director shall release the grants from the office of the Commissioner only after certifying/ensuring that the management of this institution strictly fulfils the above conditions.
13. If any lapses arise regarding the release of grants, the concerned Regional Joint Commissioner, Collegiate Education Department will be completely responsible.

The expenses towards the grant to Vivekananda College of Law, Bengaluru, which has been included in the Grant in Aid shall be borne out of the Accounts Head No 2014-00-105-0-15 Private Aided Law Colleges-101-Grant-in-aid Schemes(Plan).

This order has been passed in concurrence with the Finance Department's Unofficial Note No FD 176 Expenditure-10/2016 dated 11.07.2016

By the order of the Governor of Karnataka
And in his name
(C S Sudhamani)
Under Secreatry to Govt,
Department of Law (Human Rights)

To,

Complier, Karnataka State Papers, Bengaluru is requested to publish this in the Rajya Patra and send 100 copies thereof to the Law Department(Human Rights Branch) Room No 201, Vikas Soudha, Bengaluru.

1. Principal Secretary General (G & SSA), Karnataka New Building, 'Audit Bhavan', PO BOX No 5398, Bengaluru 560001

Principal
VIVEKANANDA COLLEGE OF LAW
# 12/1, 3rd Cross, Maruthi Extn
Gayathri Nagar, Bengaluru-560 021

2. Principal General Secretry(A &E), Karnataka Park House Road, Post Box No 5329, Bengaluru 560001
3. Principal Secretary (E&R.S.A), Karnataka New Building, 'Audit Bhavan', PO BOX No 5398, Bengaluru 560001
4. Chief Secretary to Government, Finance Department, Vidhana Soudha, Bengaluru
5. Chief Secretary to Government, Higher Education Department, Multi storied building, Bengaluru
6. Secretary to Government, Social Welfare Department, Vikasa Soudha, Bengaluru
7. Commissioner, Collegiate Education Department, Palace Road, Bengaluru
8. Regional Joint Director, Collegiate Education Department, Bengaluru
9. Principal, Vivekananda College of Law, Bengaluru, No 12/1, 3rd cross, Maruthi Extension, Gayathri Nagar, Bengaluru 560021

Principal
VIVEKANANDA COLLEGE OF LAW
# 12/1, 3rd Cross, Maruthi Extn
Gayathri Nagar, Bengaluru-560 021